

‘ಜಗನ್ಮೋಹಿನಿ’ ನಿರ್ಮಾತೃ ಡಿ. ಶಂಕರ್‌ಸಿಂಗ್ ಹಾಗೂ ಪ್ರತಿಮಾದೇವಿ

ವಾರಿಸು’ ಎಂಬ ಜಪಾನಿ ಕಥೆ ಆಧಾರಿತ ‘ಚಂಚಲಕುಮಾರಿ’, ‘ಧರ್ಮಸ್ಥಳ ಮಹಾತ್ಮೆ’ ಮುಂತಾದ ಚಿತ್ರಗಳನ್ನು ನಿರ್ಮಿಸಿದರು. ಇವುಗಳಲ್ಲಿ ನನ್ನ ಪ್ರೈಮರಿ ಶಾಲಾದಿನಗಳಲ್ಲಿ ನೋಡಿದ ‘ಜಗನ್ಮೋಹಿನಿ’ ಚಿತ್ರದ ಬಗ್ಗೆ ನನ್ನ ನೆನಪಿನಲ್ಲಿ ಉಳಿದಿರುವ ಅಂಶಗಳನ್ನು ಹೇಳಬಯಸುತ್ತೇನೆ.

‘ಜಗನ್ಮೋಹಿನಿ’ ಚಿತ್ರವು ಒಬ್ಬ ರಾಜ ಮತ್ತು ಹುಡುಗಿಯ ಪ್ರೇಮದ ಕಥೆ. ರಾಜ ಹುಡುಗಿಗೆ ಮೋಸ ಮಾಡಿದ್ದರಿಂದ ಅವಳು ಆತ್ಮಹತ್ಯೆ ಮಾಡಿಕೊಂಡು ಮೋಹಿನಿ ದೆವ್ವವಾಗಿಯೂ, ರಾಜ ಒಬ್ಬ ಸಾಮಾನ್ಯ ಮನುಷ್ಯನಾಗಿಯೂ ಪುನರ್ಜನ್ಮ ಪಡೆಯುತ್ತಾರೆ. ಮೋಹಿನಿ ಆಗಲೂ ಅವನನ್ನು ಆಕರ್ಷಿಸಿ ಪಡೆಯಲು ಪ್ರಯತ್ನಿಸುತ್ತಿರುತ್ತಾಳೆ. ಅವಳ ಪ್ರಭಾವದಿಂದ ಪಾರಾಗಲು ಪುನರ್ಜನ್ಮ ಪಡೆದ ರಾಜನಿಗೆ ಒಬ್ಬ ಸುಶೀಲೆ ಹುಡುಗಿಯ ಜೊತೆ ಮದುವೆ ಮಾಡುತ್ತಾರೆ. ಮದುವೆಯ ರಾತ್ರಿ ಹುಡುಗ, ಹುಡುಗಿ ಸೆರಗಿಗೆ ಗಂಟು ಹಾಕಿ ಮಲಗುತ್ತಾರೆ. ಆ ಗಂಟನ್ನು ಬಿಚ್ಚಿ ಹುಡುಗನನ್ನು ಹಾರಿಸಿಕೊಂಡು ಹೋಗುವ ಶಕ್ತಿ ಮೋಹಿನಿಗೆ ಇರುವುದಿಲ್ಲ. ಆದ್ದರಿಂದ ಮೋಹಿನಿ ಉಪಾಯ ಮಾಡಿ ಗೌರಿ ತನ್ನ ಮತ್ತು ಗಂಡನ ವಲ್ಲಿಯ ಗಂಟನ್ನು ಬಿಚ್ಚಿ ಹೊರಬರುವಂತೆ ಮಾಡುತ್ತಾಳೆ ಮತ್ತು ಮೋಹಿನಿ ತಾನು ಪ್ರೀತಿಸಿದವನನ್ನು ಒಂದು ಹೂವಾಗಿ ಮಾರ್ಪಡಿಸಿ ತನ್ನ ಲೋಕಕ್ಕೆ ಕೊಂಡೊಯ್ಯುತ್ತಾಳೆ. ಮುಂದೆ ದುಃಖ, ಕಷ್ಟಗಳ ಪ್ರಾರಂಭ. ಆಗ ಜಗನ್ಮಾತೆ ಪಾರ್ವತಿ ಕೊರವಂಜಿ ವೇಷದಲ್ಲಿ ‘ಕಣಿಯ ಹೇಳಲು ಬಂದೆ ಕೇಳಮ್ಮಾ, ಮಣಿ ಮಂತ್ರವ ಬಲ್ಲ ಕೊರವಂಜಿ ನಾನಮ್ಮ’ ಎಂದು ಹಾಡುತ್ತ ಬಂದು ಗೌರಿಗೆ ತನ್ನ ಗಂಡನನ್ನು ಪಡೆಯುವ ಉಪಾಯ ಹೇಳಿಕೊಡುತ್ತಾಳೆ. ಮುಂದೆ ಎಲ್ಲವೂ ಸುಖಾಂತ್ಯ. ಅಂದು ಮೋಹಿನಿಯಾಗಿ ಹರಿಣಿ, ಗೌರಿಯಾಗಿ ಪ್ರತಿಮಾದೇವಿ, ಜಗನ್ಮಾತೆ ಕೊರವಂಜಿಯಾಗಿ ಜಯಶ್ರೀ ಅಭಿನಯಿಸಿದ್ದರು. ಈಶ್ವರಪ್ಪ, ವೀರಭದ್ರಪ್ಪ, ಶ್ರೀನಿವಾಸರಾವ್ ಮತ್ತು ಮಹಾಬಲರಾವ್ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದರು.

ಆ ಚಿತ್ರದಲ್ಲಿ ಮೆಚ್ಚಬೇಕಾದ ಅನೇಕ ಅಂಶಗಳಿದ್ದವು. ಶಂಕರ್‌ಸಿಂಗ್‌ರು ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ಚಿತ್ರೀಕರಣ ನಡೆಸಿದ್ದರು. ಮೈಸೂರಿನ ಸುತ್ತಮುತ್ತ ಶ್ರೀರಂಗಪಟ್ಟಣ, ತಲಕಾಡುಗಳ ಸುಂದರ ತಾಣಗಳನ್ನೇ ಆರಿಸಿ ಹೊರಾಂಗಣ ಚಿತ್ರೀಕರಣ ಮಾಡಿದರು. ಸಂಪೂರ್ಣ ನಮ್ಮ ರಾಜ್ಯದ್ದೇ ಚಿತ್ರವನ್ನಾಗಿಸಿದರು. ಆದರೆ ‘ಜಗನ್ಮೋಹಿನಿ’ ಹಾಡುಗಳು ಮಾತ್ರ ಅಂದಿನ ಪ್ರಸಿದ್ಧ ಹಿಂದಿ ಚಿತ್ರಗೀತೆಗಳ ಅನುಕರಣೆ! ಚಿತ್ರದ ‘ಎಂದೊ, ಎಂದೊ ನಿನ್ನ ದರುಶನ’ ಹಾಡು ಅಂದಿನ ಸುಪ್ರಸಿದ್ಧ ಹಿಂದಿಯ ‘ಮಹಲ್’ ಚಿತ್ರದ ಹಾಡಿನ ನಕಲು, ಅದೇ ರೀತಿ ಚಿತ್ರದ ಉಳಿದ ಹಾಡುಗಳು. ಅದು ಅಂದಿನ ಸೀಮಿತ ಅನುಕೂಲಗಳ ಪರಿಸ್ಥಿತಿಯಲ್ಲಿ ಚಿತ್ರೀಕರಿಸುವ ಅನಿವಾರ್ಯತೆ ಆಗಿರಬಹುದು.

ಈಗ ತಾಂತ್ರಿಕತೆಯಿಂದ ದೊರೆತಿರುವ ಅಭೂತಪೂರ್ವ ಕ್ಯಾಮೆರಾಗಳು, ಜೂಮ್ ಲೆನ್ಸ್‌ಗಳು, ಗ್ರಾಫಿಕ್ಸ್‌ಗಳು, ವಿದೇಶಿ ಚಿತ್ರೀಕರಣದ ಧಾಂ, ಧೂಮ್ ಇಲ್ಲದಿದ್ದ ಆ ಕಾಲದಲ್ಲಿ ತಮಗೆ ಲಭ್ಯವಿದ್ದ ಸೀಮಿತ ಅನುಕೂಲಗಳನ್ನು ಉಪಯೋಗಿಸಿಕೊಂಡು ಚಲನಚಿತ್ರ ಪ್ರಪಂಚದಲ್ಲಿ ಶಂಕರ್‌ಸಿಂಗ್‌ರು ತೋರಿದ ಬದ್ಧತೆ, ಪರಿಶ್ರಮಗಳು ಅಂದು ಊಹಿಸಲಾಗದ ಸಾಹಸವಲ್ಲವೆ?

ಪ್ರತಿಕ್ರಿಯಿಸಿ: feedback@sudha.co.in

